ಕರ್ನಾಟಕ ಸರ್ಕಾರ
ಸಮಾಜ ಕಲ್ಯಾಣ ಇಲಾಖೆ.
ನಿರ್ದೇಶಕರ ಕಛೇರಿ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ,

ನಂ.16/2ಬಿ, 3ನೇ ಮಹಡಿ, ಡಾ.ಬಿ.ಆರ್.ಅಂಬೇಡ್ಕರ್ ಭವನ, ಮಿಲ್ಲರ್ಸ್ ರಸ್ತೆ, ವಸಂತನಗರ,ಬೆಂಗಳೂರು-560052.
ದೂರವಾಣಿ ಸಂಖ್ಯೆ: 080-22204821 E-mail – ambedkarbhavana@gmail.com

ಸಂ:ಅಂ.ಸಂ.ಸಂ/ಸಿಬ್ಬಂದಿ/ಸಿಆರ್-15/2019-20 ದಿನಾಂಕ: 7-10-2020

ಕುಲಸಚಿವರು,
ಕುವೆಂಪು ವಿಶ್ವವಿದ್ಯಾಲಯ,
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ,
ಶಿವಮೊಗ್ಗ-577451

ಕುವೆಂಪು ವಿಶ್ವವಿದ್ಯಾಲಯ
ಜ್ಞಾನ ಸಹ್ಯಾದ್ರಿ
14 OCT 2020
ಶಂಕರಘಟ್ಟ-577451
ಸಂ. 4742

ಮಾನ್ಯರೇ,

ವಿಷಯ:- ಪರಿಶಿಷ್ಟ ಜಾತಿಯ ಅಲೆಮಾರಿ ಸಮುದಾಯದ ಧಾರ್ಮಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ಚಾರಿತ್ರ್ಯವುಳ್ಳ ಇತಿಹಾಸಕಾರರ ಹಾಗೂ ಪರಿಶಿಷ್ಟ ಜಾತಿಯ ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನಕ್ಕಾಗಿ ಅರ್ಹ ಪ್ರಾಧ್ಯಾಪಕರಿಂದ ಅರ್ಜಿ ಸಲ್ಲಿಸುವ ಬಗ್ಗೆ.

ಉಲ್ಲೇಖ:- ಈ ಕಛೇರಿಯ ಪ್ರಕಟಣಾ ಪತ್ರ ಸಂ: ಅಂಸಂಸಂ/ಸಿಬ್ಬಂದಿ/ಸಿಆರ್-15/2019-20 ದಿನಾಂಕ 14-09-2020..

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ ವತಿಯಿಂದ ಪರಿಶಿಷ್ಟ ಜಾತಿಯ ಅಲೆಮಾರಿ ಸಮುದಾಯದ ಧಾರ್ಮಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ಚಾರಿತ್ರ್ಯವುಳ್ಳ ಇತಿಹಾಸಕಾರರ ಹಾಗೂ ಪರಿಶಿಷ್ಟ ಜಾತಿಯ ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನ ಕಾರ್ಯಕ್ರಮದ ಸಂಬಂಧ ಅರ್ಜಿಗಳನ್ನು ಆಹ್ವಾನಿಸಿರುವ ಸಂಬಂಧ ದಿನಾಂಕ 7-10-2020 ರಂದು ಎರಡು ಕನ್ನಡ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿದ್ದು, ಅದರ ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. ಸದರಿ ಪ್ರಕಟಣೆಯನ್ನು ತಮ್ಮ ವಿಶ್ವವಿದ್ಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸಬೇಕೆಂದು ಕೋರಲಾಗಿದೆ.

ವಂದನೆಗಳೊಂದಿಗೆ,

UCCF/ Dr. Ambedkar Centre

ತಮ್ಮ ವಿಶ್ವಾಸಿ,
7/10
ನಿರ್ದೇಶಕರು(ಪ್ರಭಾರ),
ಡಾ|| ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ,
ಬೆಂಗಳೂರು.

## ಸಮಾಜ ಕಲ್ಯಾಣ ಇಲಾಖೆ

## ಡಾ॥ ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ

ನಿರ್ದೇಶಕರ ಕಛೇರಿ, ನಂ.16/2ಬಿ, 3ನೇ ಮಹಡಿ, ಡಾ॥ ಬಿ.ಆರ್. ಅಂಬೇಡ್ಕರ್ ಭವನ,
ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಂಗಳೂರು – 560052. ದೂರವಾಣಿ ಸಂಖ್ಯೆ: 080-22204821
ಇ-ಮೇಲ್: ambedkarbhavana@gmail.com

ಸಂಖ್ಯೆ:ಅಂಸಂಸಂ/ಸಿಬ್ಬಂದಿ/ಸಿಆರ್-15/2019-20 ದಿನಾಂಕ: 14-09-2020

### ಪ್ರಕಟಣೆ

ಪರಿಶಿಷ್ಟ ಜಾತಿಯ ಅಲೆಮಾರಿ ಕೊರಮ-ಕೊರಚ (ಕುಳುವ) ಸಮುದಾಯದ ಮೇರು ವ್ಯಕ್ತಿಗಳಾದ 1) ಶ್ರೀ ಕುಶಲಾನಂದ ಯೋಗಿಯವರು, ಶರಣ ಪರಂಪರೆ. 2) ಸುಪ್ರಸಿದ್ಧ ಶಹನಾಯಿ ವಾದಕ ಶ್ರೀ ಸನಾದಿ ಅಪ್ಪಣ್ಣರವರು. 3) ಸ್ವಾತಂತ್ರ್ಯ ಹೋರಾಟಗಾರರ ಶ್ರೀ ವೀರ ಕನ್ನೇಶ್ವರ ರಾಮರವರು. 4) ವಚನಗಾರ್ತಿ ಕಾಲಕಣ್ಣಿಕೆ ಕಾಮಮ್ಮನವರು / ಕೊರವಂಜಿ ರವರುಗಳ ಇತಿಹಾಸ, ಜೀವನ ಮತ್ತು ಹೋರಾಟದ ಚರಿತ್ರೆ ಮತ್ತು ವಸ್ತುನಿಷ್ಠವಾಗಿ ಅಧ್ಯಯನ/ಸಂಶೋಧನಾ ವರದಿ. 5) ಸಿಳ್ಳೇಕ್ಯಾತಾಸ್ ಸಮುದಾಯದ ಪರ್ಯಾಯ ಪದಗಳಾದ ಕಿಳ್ಳೇಕ್ಯಾತ, ಕಟಬು, ಕಟಬರ್, ಬುಂಡೆಬೆಸ್ತ, ಜಾಲಗಾರ್ ಜಾತಿಗಳ ಕುಲಶಾಸ್ತ್ರೀಯ ಅಧ್ಯಯನ. 6) ಕೊರಮ ಸಮುದಾಯದ ಪರ್ಯಾಯ ಪದಗಳಾದ ಎರ್‌ಕಲ, ಇರಕಲ, ಕೈಕಾಡಿ, ಕೊರಗಾರ್, ಕೊರಮ್‌ಶೆಟ್ಟಿ, ಕುಂಜಿ, ಕೊರ್ವಾರಿ, ಎರುಕುಲ ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನ.

ಮೇಲ್ಕಂಡ ಇತಿಹಾಸಕಾರರ ಹಾಗೂ ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನ ಕಾರ್ಯ ಕೈಗೊಳ್ಳಲು ಅರ್ಹ ಆಸಕ್ತರಿಂದ ಸಂಸ್ಥೆಯ ಷರತ್ತು ಹಾಗೂ ನಿಬಂಧನೆಗೊಳಪಟ್ಟು ಅರ್ಜಿ ಆಹ್ವಾನಿಸಲಾಗಿದೆ. ಷರತ್ತು ಮತ್ತು ನಿಬಂಧನೆಗಳು ಹಾಗೂ ಅರ್ಜಿಯನ್ನು ಕಛೇರಿ ವೇಳೆಯಲ್ಲಿ ಖುದ್ದಾಗಿ ಬಂದು ಅಥವಾ ದೂರವಾಣಿಯ ಮೂಲಕ ಕರೆ ಮಾಡಿ ಇ-ಮೇಲ್ ಮೂಲಕ ಪಡೆದುಕೊಂಡು, ಷರತ್ತು ಮತ್ತು ನಿಬಂಧನೆಗಳನ್ನು ಒಪ್ಪಿದ ನಂತರ ಆಸಕ್ತರು ನಿರ್ದೇಶಕರು, ಡಾ॥ ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಬೆಂಗಳೂರು ರವರಿಗೆ ಪತ್ರಿಕೆಯಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ 30 ದಿವಸಗಳೊಳಗೆ ಅರ್ಜಿ ಸಲ್ಲಿಸತಕ್ಕದ್ದು. ನಿಗಧಿತ ಅವಧಿಯ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಪ್ರತಿ ಸಂಶೋಧನೆಗೆ ರೂ. 3.50 ಲಕ್ಷಗಳನ್ನು ನಿಗಧಿಪಡಿಸಿದೆ. ದೂರವಾಣಿ ಸಂಖ್ಯೆ: 080-222048211, ಮೊಬೈಲ್ ಸಂಖ್ಯೆ: 9740401417, 9341774015.

ಸಹಿ/- ಯೋಜನಾಧಿಕಾರಿ
ಡಾ॥ ಬಿ.ಆರ್. ಅಂಬೇಡ್ಕರ್ ಸಂಶೋಧನಾ ಸಂಸ್ಥೆ,
ಬೆಂಗಳೂರು.

DIPR/DDU/Adverto/1295/2020-21

**ಈ ಪ್ರಕಟಣೆಯು ದಿನಾಂಕ:07-10-2020 ಬುಧುವಾರ ವಿಜಯ ಕರ್ನಾಟಕ ಮತ್ತು ಪ್ರಜಾವಾಣಿ ದಿನಪತ್ರಿಕೆಗಳಲ್ಲಿ ಪ್ರಕಟಣೆಗೊಂಡಿದೆ**